## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1080

ಸದಸ್ಯರ ಹೆಸರು : ಶ್ರೀ ಎಸ್. ನಾಗರಾಜ್ (ಸಂದೇಶ ನಾಗರಾಜ್)

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 13-03-2020

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| ಅ | ಹನೂರಿನಿಂದ 12 ಕಿ.ಮೀ ದೂರ ಇರುವ ಗೂಳ್ಯ (ಬಿ.ಎಂ.ಹಳ್ಳಿ) ಗ್ರಾಮಕ್ಕೆ ರಾಜ್ಯ ರಸ್ತೆ ಸಾರಿಗೆ ಬಸ್ ಸೌಲಭ್ಯ ಕಲ್ಪಿಸಲಾಗುವುದೇ; | ಈ ಹಿಂದೆ ಕೊಳ್ಳೇಗಾಲ ಘಟಕದ ಅನುಸೂಚಿ ಸಂಖ್ಯೆ 74/75 ರಲ್ಲಿ ಹನೂರಿನಿಂದ ಗೂಳ್ಯಕ್ಕೆ (ಬಿ.ಎಂ.ಹಳ್ಳಿ) ಬೆಳಿಗ್ಗೆ 08.00 ಮತ್ತು ಸಂಜೆ 16.00 ಗಂಟೆಗೆ 2 ಸುತ್ತುವಳಿಗಳನ್ನು ಕಾರ್ಯಾಚರಣೆ ಮಾಡಿದ್ದು, ಪ್ರಯಾಣಿಕರಿಂದ ಉತ್ತೇಜನ ಸಿಗದೆ ಅತೀ ಕಡಿಮೆ ಆದಾಯ ಬಂದು ಸಾರಿಗೆಯು ನಷ್ಟದಲ್ಲಿ ಕಾರ್ಯಾಚರಣೆಯಾದ ಕಾರಣದಿಂದ ಸದರಿ ಸಾರಿಗೆಯನ್ನು ಕಡಿತಗೊಳಿಸಲಾಗಿರುತ್ತದೆ. |
| ಆ | ಬಿ.ಎಂ.ಹಳ್ಳಿ, ಕೆ.ವಿ.ಎನ್ ದೊಡ್ಡಿ, ತೋಮರ್‌ಪಾಳ್ಯ ಮೂಲಕ ಈ ಊರಿಗೆ ಸಾರಿಗೆ ಬಸ್ ಸೌಲಭ್ಯ ಕಲ್ಪಿಸಿ ಗ್ರಾಮೀಣ ಜನರಿಗೆ ಸಾರಿಗೆ ಸೌಲಭ್ಯ ಕಲ್ಪಿಸಿ ಕೊಡಲಾಗಿದೆಯೇ; ಹಾಗಿದ್ದಲ್ಲಿ, ಎಷ್ಟು ದಿವಸದೊಳಗಾಗಿ ಕಲ್ಪಿಸಿಕೊಡಲಾಗುವುದು? | ಕ.ರಾ.ರ.ಸಾ.ನಿಗಮದ ಕೊಳ್ಳೇಗಾಲ ಘಟಕದ ಅನುಸೂಚಿ ಸಂಖ್ಯೆ 74/75 ರಲ್ಲಿ ಹನೂರು-ಚಂಗ್ವಾಡಿ ಕ್ರಾಸ್-ನಾಗನಾಥ-ಬೈರನಾಥ-ತೋಮರ್‌ಪಾಳ್ಯ ಮಾರ್ಗದಲ್ಲಿ ಪ್ರಸ್ತುತ 11.30, 13.15, 13.45, 14.45, 15.15, 16.45, 18.15, 20.00ರ ಸಮಯಗಳಲ್ಲಿ ಸಾರ್ವಜನಿಕ ಪ್ರಯಾಣಿಕರು ಮತ್ತು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸಾರಿಗೆಗಳು ಕಾರ್ಯಚರಣೆಯಲ್ಲಿದೆ.<br><br>ಬೆಳಿಗ್ಗೆ 8.00 ಗಂಟೆಗೆ ಮತ್ತು ಸಂಜೆ 16.00 ಗಂಟೆಗೆ 2 ಸುತ್ತುವಳಿಗಳನ್ನು ದಿನಾಂಕ 01.04.2020ರಿಂದ ಜಾರಿಗೆ ಬರುವಂತೆ ಕಾರ್ಯಾಚರಿಸಲು ಯೋಜಿಸಲಾಗಿರುತ್ತದೆ. |

ಸಂಖ್ಯೆ: ಟಿಡಿ 79 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು